**ಓ.ಎಸ್.ನಂ.203/2015**
**ಪಿ ಡಬ್ಲ್ಯೂ: 1**

**ದಿನಾಂಕ:28.02.2020 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ.ಜಿ.ಬಿ ವಕೀಲರಿಂದ :**

ಪ್ರಕರಣದ ಬಗ್ಗೆ ನನಗೆ ಮಾಹಿತಿ ಇರುತ್ತದೆ ಎಂದರೆ ಸರಿ. ಜಮೀನನ್ನು ನನ್ನ ಗಂಡ 1 ನೇ ಪ್ರತಿವಾದಿಯಿಂದ ಖರೀದಿಸಿದ ಬಗ್ಗೆ ಈ ದಾವೆಯನ್ನು ಹೂಡಿರುತ್ತೇನೆ. ಜಮೀನು ಖರೀದಿಸಿದ ಬಗ್ಗೆ ನನಗೆ ಮಾಹಿತಿ ಇರುತ್ತದೆ ಎಂದರೆ ಸರಿ. ಸದರಿ ಜಮೀನಿನ ಸರ್ವೇ ನಂ.84/2 ಇರುತ್ತದೆ . ಸದರಿ ಜಮೀನಿನ ವಿಸ್ತೀರ್ಣ 2 ಎಕರೆ 36 ಗುಂಟೆ ಇರುತ್ತದೆ. ಸದರಿ ಜಮೀನಿನ ಖಾತೆ 1 ನೇ ಪ್ರತಿವಾದಿಯ ಹೆಸರಿನಲ್ಲಿತ್ತು. 1 ನೇ ಪ್ರತಿವಾದಿಯು ನನಗೆ ಸಂಬಂಧಿಕರಾಗಬೇಕು. 1 ನೇ ಪ್ರತಿವಾದಿ ಮತ್ತು ಆತನ ಅಣ್ಣ ಬಸವರಾಜಪ್ಪ ಒಟ್ಟು ಕುಟುಂಬದಲ್ಲಿ ಇರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ಆತನ ಅಣ್ಣ ಬಸವರಾಜಪ್ಪನ ಮದ್ಯೆ ಪಾಲುವಿಭಾಗದ ದಾವೆ ಇದ್ದವು ಮತ್ತು ಹಾಲಿ ಸದರಿ ಪ್ರಕರಣವು ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ಬಗ್ಗೆ ನನಗೆ ನನ್ನ ಗಂಡನ ಮರಣಾ ನಂತರ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಗಂಡನಿಗೆ ದಾವಾ ಸ್ವತ್ತಿಗೆ ಸಂಬಂಧಿಸಿ 1 ನೇ ಪ್ರತಿವಾದಿ ಮತ್ತು ಆತನ ಅಣ್ಣನ ಮದ್ಯೆ ವ್ಯಾಜ್ಯ ಇದ್ದ ಬಗ್ಗೆ ಮಾಹಿತಿ ಇತ್ತು ಎಂದರೆ ನನಗೆ ಗೊತ್ತಿಲ್ಲ.

ನನಗೆ ಜಮೀನು ಖರೀದಿಸುವ ವ್ಯವಹಾರದ ಬಗ್ಗೆ ನನ್ನ ಗಂಡ ತಿಳಿಸಿದ್ದರು. ವ್ಯವಹಾರದ ಮಾತು ಕತೆ ಎಲ್ಲಿಯಾಯಿತು ಎಂದು ನನಗೆ ಗೊತ್ತಿಲ್ಲ. ವ್ಯವಹಾರ ಆದಾಗ ವಿಶ್ವನಾಥ, ಚಿಕ್ಕವೀರಪ್ಪ, ಬಸವರಾಜ್ ಮತ್ತು ಚಂದ್ರಯ್ಯ ಹಾಜರಿದ್ದರು. ಪ್ರತಿವಾದಿಯರು ನನ್ನಿಂದಾಗಲಿ ನನ್ನ ಗಂಡನಿಂದಾಗಲಿ ವ್ಯವಹಾರಕ್ಕೆ ಸಂಬಂಧಿಸಿ ಹಣ ಪಡೆದಿಲ್ಲ ಮತ್ತು ಯಾವುದೆ ಕರಾರು ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವ ತ್ತು ಭದ್ರ ಮೇಲ್ದಂಡೆ ಯೋಜನೆಗೆ ಭೂ ಸ್ವಾಧೀನ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಭೂ ಸ್ವಾಧೀನ ಆದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಕರಾರು ಪತ್ರದ ನಂತರ ನನ್ನ ಗಂಡ ಮತ್ತು ನಾನು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖರೀದ

ವ್ಯವಹಾರಕ್ಕೆ ಸಂಬಂಧಿಸಿ ಯಾವ ಸ್ಥಳದಲ್ಲಿ ಪಂಚಾಯ್ತಿ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಪಂಚಾಯ್ತಿ ಆಗಿರುವುದು ನನಗೆ ಗೊತ್ತು ಎಂದು ನುಡಿಯುತ್ತಾರೆ. ನಾನು ಸದರಿ ಪಂಚಾಯ್ತಿಯಲ್ಲಿ ಭಾಗವಹಿಸಿರಲಿಲ್ಲ. ಸಾಕ್ಷಿ ಮುಂದುವರೆದು ನನ್ನ ಗಂಡ ಭಾಗವಹಿಸಿದ್ದರು ಎಂದು ನುಡಿಯುತ್ತಾರೆ. ಪ್ರತಿವಾದಿಯರು ಯಾವುದೆ ಕರಾರು ಪತ್ರವನ್ನು ಬರೆದುಕೊಡದಿದ್ದರೂ ಸಹ, ಯಾವುದೆ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷ್ಯ ನುಡಿಯುುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ.
ಹೊಸದುರ್ಗ .